# മക്കളിഗാഗി ബൈബൽ

**ಅರ್ಪಿಸುವ**



# ನೆಹೆಮಿಯನ ಪೌಳಿ ಗೋಡೆ


ಬರಹಗಾರರು: Edward Hughes
ಚಿತ್ರಲೇಖಕರು: Jonathan Hay
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Mary-Anne S.


60ರ 35ನೇ ಕಥೆ


**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.**
**ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada

ಪಾರಸಿಯ ದೇಶವು ಪ್ರಪಂಚವನ್ನು ಆಳಿದ ಪ್ರಭಲ ದೇಶವಾಗಿತ್ತು. ಅರಸನಾದ ಅರ್ತಷಸ್ತನ ಪಾರಸಿಯ ದೇಶವನ್ನು ಆಳುತ್ತಿದ್ದನು. ಅದು ಅವನನ್ನು ಪ್ರಪಂಚದದ ಪ್ರಭಾವವುಳ್ಳ ರಾಜನನ್ನಾಗಿ ಮಾಡಿತು. ನೆಹೆಮಿಯ ಎಂಬ ಹೆಸರುಳ್ಳ ಒಬ್ಬ ಯೆಹೋದ್ಯನು ಅರಸನ ಪ್ರಮುಖ ಸಹಾಯಕರಲ್ಲಿ ಒಬ್ಬನಾಗಿದ್ದನು. ಅವನು ಅರಸನ ಆಹರವನ್ನು ರುಚಿ ನೋಡಿ ಕಲುಷಿತ (ವಿಷ) ಆಹಾರದಿಂದ ಕಾಪಾಡುವುದು ಆತನ ಕೆಲಸವಾಗಿತ್ತು.





ಒಂದು ದಿನ ನೆಹೆವಿಯನು ಅರಸನ ಮುಂದೆ ಕಳೆಗುಂದಿದವನಾಗಿ ಬಂದು ನಿಂತನು. ಅವನಿಗೆ ಏನಾಗಿದೆ ಎಂಬುದನ್ನು ತಿಳಿಯಲು ಅರಸನು ಬಯಸಿದನು. ನೆಹೆವಿಯನು 'ಅರಸನು ಚಿರಂಚೀವಿಯಾಗಿರಲಿ, ನನ್ನ ಪೋರ್ವಿಕರ ಸಮಾಧಿಯಿರುವ ಪಟ್ಟಣ ಹಾಳಾಗಿ ಅದರ ಬಾಗಿಲುಗಳು ಸುಟ್ಟು ಹೋಗಿವೆ ಅದಕ್ಕಾಗಿ ನಾನು ಕಳೆಗುಂದಿದವನಾಗಿದ್ದೆನೆ' ಅಂದನು. ಹಲವು ವರ್ಷಗಳ ಹಿಂದೆ ಯುದ್ದದಲ್ಲಿ ಹಾಳಾದ ಯೆರೊಸಲೇಮಿನ ಬಗ್ಗೆ ನೆಹೆಮಿಯನು ಮಾತಾಡುತ್ತಿದ್ದನು.



ಅರಸನಾದ ಅರ್ತಷಸ್ತನು "ನಿನ್ನ ಅಪೇಕ್ಷೆಯೇನು" ಎಂದು ಕೇಳಿದನು. ಅದಕ್ಕೆ ನೆಹೆಮಿಯನು ‘ನಾನು ಯೆಹೋದ ದೇಶಕ್ಕೆ ಹೋಗಿ ಪಟ್ಟಣವನ್ನು ಕಟ್ಟುಲು ಯೆರೂಸಲೇಮಿಗೆ ಹೋಗಲು ನನಗೆ ಅಪ್ಪಣೆಯಾಗಬೇಕೆಂದು’ ಬೇಡಿಕೂಂಡನು. ಅರಸನಾದ ಅರ್ತಷಸ್ತನು ದಯೆಯಿಂದ ಒಪ್ಪಿಕೂಂಡನು. ಹಾಗೆಯೆ ತನ್ನ ಪ್ರಯಾನದಲ್ಲಿ ತನ್ನನ್ನು ಕಾಪಾಡಿಕೊಳ್ಳಲು ಅಧಿಕೃತವಾದ ಪತ್ರಗಳನ್ನು ಕೂಟ್ಟನು.



3

ಅರಸನು ಅದಕ್ಕಿಂತ ಹೆಚ್ಚಾದ ಸಹಾಯವನ್ನು ಮಾಡಿದನು, ಹಾಗೆಯೇ ಅರಸನು ಅರಣ್ಯಕ್ಕೆ ಕಾವಲುಗಾರನಾಗಿರುವ ಆಸಾಫನಿಗೂ ಪತ್ರವನ್ನು ಕೂಟ್ಟನು, ಪೌಳಿಗೋಡೆಯನ್ನು ಕಟ್ಟಲು ಬೇಕಾಗುವಷ್ಟು ಮರವನ್ನು (ತೋಲೆ) ನೆಹೆನಿಯನಿಗೆ ಕೊಡಲು ಆಸಾಫನಿಗೆ ಆಜ್ಞಾಪಿಸಿದನು.



4

ನೆಹೆಮಿಯನು ಯೆರುಸಲೇಮಿಗೆ ಬಂದಾಗ ಪಟ್ಟಣದ ಅಧಿಕಾರಿಗಳನ್ನು ಒಟ್ಟುಗೂಡಿಸಿ "ನಾವು ದುರವಸ್ಥೆಯಲ್ಲಿದ್ದೇವೆ, ಪಟ್ಟಣವು ಹಾಳು ಬಿದ್ದಿದೆ, ಅದರ ಬಾಗಿಲುಗಳು ಸುಡಲ್ಪಟ್ಟಿವೆ, ಬನ್ನಿರಿ ತಿರುಗಿ ಕಟ್ಟೋಣ" ಎಂದು ಹೇಳಿದನು. ಅರಸನಾದ ಅರ್ತಷಸ್ತನ ಸಮ್ಮತಿ ಸುಚಿಸಿದ್ದಾನೆ ಎಂದನು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ದೇವರು ಅವರ ಸಂಗಡ ಇದ್ದನು.



5

ನೆಹೆಮಿಯನಲ್ಲಿದ್ದಂತಹ ನಂಬಿಕೆ ಮತ್ತು ಉತ್ಸಾಹ ಜನರನ್ನು ಹುರಿದುಂಬಿಸಿತು, ತಿರುಗಿ ಕಟ್ಟೋಣ ಎಂದು ಎಲ್ಲರೂ ಒಪ್ಪಿಕೋಂಡರು. ಪ್ರತಿ ಒಂದು ಕುಟುಂಬವು ಗೋಡೆಯ ಒಂದು ಭಾಗವನ್ನು ಕಟ್ಟಲು ಮನಸ್ಸು ಮಾಡಬೇಕು ಎಂದು ನೆಹೆಮಿಯನು ಹೇಳಿದನು.



6

ಅದರೆ ಎಲ್ಲರೂ ಗೋಡೆಯನ್ನು ಕಟ್ಟುವುದಕ್ಕೆ ಒಪ್ಪಲಿಲ್ಲ. ಸನ್ಬಲ್ಲಟನು ಆತನ ಸ್ನೇಹಿತರು ಟೋಬಿಯ ಮತ್ತು ಗೆಕ್ಷೆಮನು ಯಹೂದ್ಯರಲ್ಲದರಿಂದ ಅವರು ಗೋಡೆಯನ್ನು ಕಟ್ಟುವುದಕ್ಕಾಗಲಿ ಅಥವಾ ಬಾಗಿಲುಗಳನ್ನು ಹೋಂದಿಸುವುದಕ್ಕಾಗಲಿ ಇಚ್ಚಿಸಲಿಲ್ಲ.



7

ಕೆಲಸ ಮುಂದುವರಿಸುತ್ತಿರುವಾಗ ಸನ್ಬಲ್ಲಟನು ಬಹಳ ಕೋಪಗೊಂಡನು. ಆತನು ಮತ್ತು ಆತನ ಸ್ನೇಹಿತರು ಈ ಯಹೂದ್ಯರನ್ನು ಗೇಲಿ ಮಾಡಿದರು. ಅವರು ದುರ್ಬಲವಾದ ಗೋಡೆಯನ್ನು ಕಟ್ಟೇ ಮುಗಿಸಿದಾಗ ಒಂದು ಚಿಕ್ಕ ನರಿ ಬಂದು ನಾಶ ಮಾಡುತ್ತದೆ ಎಂದು ಟೋಬಿಯನು ಹೇಳಿದನು. ನೆಹೆಮಿಯನು ಏನು ಮಾತಡಲಿಲ್ಲ ಬದಲಾಗಿ ದೇವರೆ ಅವರನ್ನು ನೋಡಿಕೊಳ್ಳಲಿ ಎಂದು ಪ್ರಾರ್ಥಿಸಿದನು.



8

ಅವರ ತಿರಸ್ಕಾರದ ಗೇಲಿಯು ಯಾವುದೆ ರೀತಿಯ ಪರಿನಾಮವನ್ನು ಬೀರದೆ ಇದ್ದದರಿಂದ ಅವರು ಯೆರುಸಲೆಮಿಗೆ ವಿರುದ್ದವಾಗಿ ತೂಂದರೆಯುಂಟುಮಾಡಲು ಎಷ್ಟು ಸಾದ್ಯವೂ ಅಷ್ಟು ಕುಯುಕ್ತಿಗಳನ್ನು ಕಲ್ಪಿಸಿದರು.



9

ನೆಹೆಮಿಯನು ದೇವರೆ ಸಹಾಯಕ್ಕಾಗಿ ಪ್ರಾರ್ಥಿಸಿದನು. ಯಾವುದೆ ಆಶ್ಚರ್ಯಕರ ಘಟನೆಗೆ ಅವಕಾಶ ಕೋಡಬಾರದೆಂಬುದಾಗಿ ಆತನು ಹಗಲು ರಾತ್ರಿ ಕಾಯುವುದಕ್ಕೆ ಕವಲುಗಾರರನ್ನು ನೇಮಿಸಿದನು.



10

ಯಹೂದ್ಯರು ಕಠಿಣವಾಗಿ ಕೆಲಸ ಮಾಡಿದ್ದರಿಂದ ಅವರು ಬಳಲಿದರು. ಅವರು ಕೆಲಸ ಮಾಡುತ್ತಿರುವಾಗ ಶತ್ರುಗಳೆನಾದರು ಬಂದು ಅವರನ್ನು ಕೊಂದುಬಿಡುತ್ತಾರೆಂಬುದಾಗಿ ಅವರಲ್ಲಿ ಕೆಲವರು ಹೆದರಿದರು. ಆದರೂ ನೆಹೆಮಿಯನು ಕೆಲಸವನ್ನು ನಿಲ್ಲಿಸಲಿಲ್ಲ. ನೆಹೆಮಿಯನು ಕಾವಲುಗಾರರಿಗೆ, ಯಾವುದೆ ಶತ್ರುಗಳಿಗಿಂತಲು ಶಕ್ತನಾದವನು ನಮ್ಮ ಸಂಗಡ ಇದ್ದಾನೆ ಎಂದು ಹೇಳಿ ಅವರನ್ನು ಕಾವಲಿರಿಸಿದನು.



11

ನೆಹೆಮಿಯನು ಒಳ್ಳೇಯ ಉದಾಹರನೆಯಾಗಿರಲು ಪ್ರಯತ್ನಿಸಿದನು. ಅರಸನಾದ ಅರ್ತಷಸ್ತನು ಅವನನ್ನು ಯೆರುಸಲೆಮಿನ ಅಧಿಪತಿಯನ್ನಾಗಿ ಮಾಡಿ, ಆಹಾರ ಸಂಪಾದಿಸುವುದಕ್ಕ್ ಜನರಿಂದ ಹಣಕ್ಕಾಗಿ ಬೇಡಿಕೆಯಿಟ್ಟನು.



12

ಆದರೆ ಅದನ್ನು ಮಾಡಲು ನೆಹೆಮಿಯನು ಒಪ್ಪಲಿಲ್ಲ. ಅವನು ಗೋಡೆಯನ್ನು ಕಟ್ಟುವವರೋಂದಿಗೆ ಕಠಿಣವಾದ ಕೆಲಸವನ್ನು ಮಾಡಿದನು. ಅವನು ಆಹಾರವನ್ನು ಕೋಳ್ಳುವುದಕ್ಕೆ ಸ್ವಂತ ಹಣವನ್ನು ಉಪಯೋಗಿಸುತ್ತಿದ್ದನು.



13

ಜನರು ಕೆಲಸವನ್ನು ಪೂರ್ಣಗೋಳಿಸಿದರು. ಕೊನೆಯದಾಗಿ ಮುಖ್ಯ ದ್ವಾರಕ್ಕೆ ಬಾಗಿಲುಗಳನ್ನು ಮಾತ್ರ ಹಾಕಬೇಕಾಗಿತ್ತು. ಅಲ್ಲಿ ಗೋಡೆಗಳಲ್ಲಿ ಯಾವುದೆ ಸಂದುಗಳಿಲ್ಲ ಎಂಬ ಸುದ್ದಿಯನ್ನು ಸನ್ಬಲ್ಲಟನೂ, ಟೋಬಿಯ ಮತ್ತು ಗೆಕ್ಷೆಮನಿಗೆ ತಿಳಿದಾಗೆ ಅವರು ನೆಹೆಮಿಯನಿಗೆ ಕೆಡುಕನ್ನುಂಟುಮಾಡಲು ಆಲೋಚಿಸಿದರು.



14













ನೆಹೆಮಿಯನ ಪೌಳಿ ಗೋಡೆ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ನೆಹೆಮಿಯನು

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**